# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 219 (255)

ಸದಸ್ಯರ ಹೆಸರು : ಡಾ|| ಯತೀಂದ್ರ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 28.01.2026

ಉತ್ತರಿಸುವ ಸಚಿವರು : ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಾಕಷ್ಟು ಮಸೀದಿ, ಈದ್ಗಾ ಮೈದಾನ ಮತ್ತು ಇನ್ನಿತರ ವಕ್ಫ್ ಆಸ್ತಿಗಳು ನೋಂದಣಿಯಾಗಿಲ್ಲದಿರುವುದರಿಂದ, ವಕ್ಫ್ ಇಲಾಖೆ ವತಿಯಿಂದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೀತಿ ಎಷ್ಟು ಮಸೀದಿ, ಈದ್ಗಾ ಮೈದಾನ ಮತ್ತು ಇನ್ನಿತರ ವಕ್ಫ್ ಆಸ್ತಿಗಳ ನೋಂದಣಿ ಬಾಕಿ ಇದೆ; ಸದರಿ ನೋಂದಣಾ ಪ್ರಕ್ರಿಯೆಯನ್ನು ಶೀಘ್ರಗತಿಯಲ್ಲಿ ಮುಕ್ತಾಯಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು) | ಹೌದು.<br><br>ರಾಜ್ಯದಲ್ಲಿ ಸುಮಾರು 1017 ಮಸೀದಿಗಳು ಹಾಗೂ ಸುಮಾರು 434 ಇತರೆ ವಕ್ಫ್ ಆಸ್ತಿಗಳು (ಮದರಸಾಗಳು) ವಕ್ಫ್ ಕಾಯ್ದೆಯಡಿ ನೋಂದಣಿಯಾಗದೇ ಬಾಕಿ ಇರುತ್ತವೆ. ಇನ್ನುಳಿದಂತೆ, ವಕ್ಫ್ ಆಸ್ತಿಯಾಗಿ ನೋಂದಾಯಿಸಲಾಗಿರುವ ಈದ್ಗಾ ಮೈದಾನಗಳ ನೋಂದಣಿ ಪ್ರಕ್ರಿಯೆಯನ್ನು ನಿಯಮಾನುಸಾರ ಪೂರ್ಣ ಗೊಳಿಸಲು ಬಾಕಿ ಇರುತ್ತದೆ.<br><br>ಕೇಂದ್ರ ಸರ್ಕಾರದಿಂದ ದಿನಾಂಕ:06.04.2025 ರಿಂದ ಜಾರಿಗೊಳಿಸಲಾಗಿರುವ ಉಮೀದ್ (UMEED) ಕಾಯ್ದೆ-2025 ಅಡಿಯಲ್ಲಿ ರೂಪಿಸಲಾಗಿರುವ ಆನ್‌ಲೈನ್ ಪೋರ್ಟಲ್ ಮೂಲಕವೇ ವಕ್ಫ್ ಆಸ್ತಿಗಳ ನೋಂದಣಿ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿದ್ದು, ಕೇಂದ್ರ ಸರ್ಕಾರದಿಂದ UMEED ಪೋರ್ಟಲ್ ನಲ್ಲಿ ಇನ್ನೂ ನೋಂದಣಿ ಪ್ರಕ್ರಿಯೆ ಆರಂಭವಾಗಿರುವುದಿಲ್ಲ.<br><br>ಕೇಂದ್ರ ಸರ್ಕಾರದಿಂದ ಉಮೀದ್ ಪೋರ್ಟಲ್ ಅನ್ನು ಹೊಸ ನೋಂದಣಿ ಕಾರ್ಯಕ್ಕಾಗಿ ತೆರೆದ ತಕ್ಷಣ, ರಾಜ್ಯದಲ್ಲಿ ಬಾಕಿಯಿರುವ ಎಲ್ಲಾ ಮಸೀದಿ, ಈದ್ಗಾ ಮೈದಾನ ಹಾಗೂ ಇತರೆ ವಕ್ಫ್ ಆಸ್ತಿಗಳನ್ನು ನೋಂದಾಯಿಸಲು ಕ್ರಮವಹಿಸಿ, ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. |

ಸಂಖ್ಯೆ: MWD-LMQ/4/2026

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು